ಕಳೆದ ಎರಡು ಮೂರು ವರ್ಷಗಳಿಂದ ಶ್ರುತಿ ಅವರಿಗೆ ಚಿತ್ರರಂಗದ ಜೊತೆಗೆ ಗಾಢವಾದ ನಂಟು ಉಳಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ. ಬದಲಿಗೆ ನಿಜಜೀವನದಲ್ಲಿ ತಾಯಿಯ ಪಾತ್ರವನ್ನು ಅಷ್ಟೇ ಆಸ್ಥೆಯಿಂದ ಅವರು ನಿಭಾಯಿಸುತ್ತಿದ್ದರು. ಅದರ ಬಗ್ಗೆ ಅವರಿಗೆ ಯಾವ ಬೇಸರವೂ ಇಲ್ಲ. ಹಾಗೆಂದು ಈ ಅಂತರದಲ್ಲಿ ನಟನೆಯ ಕುರಿತಾದ ಅವರ ವ್ಯಾಮೋಹವೇನೂ ಕಮ್ಮಿಯಾಗಿಲ್ಲ.

‘ಯಾವುದೇ ಬಗೆಯ ಸೃಜನಶೀಲತೆ ಅದರ ಜೊತೆಗಿನ ನಿರಂತರ ಒಡನಾಟವಿದ್ದಾಗಲೇ ಚೈತನ್ಯಶೀಲವಾಗಿರುತ್ತದೆ ಎಂಬುದು ನಿಜ. ಈ ಕೆಲವು ವರ್ಷಗಳಲ್ಲಿ ಕಲೆಯ ಜೊತೆಗಿನ ನನ್ನ ಒಡನಾಟ ಬಹುತೇಕ ನಿಂತೇ ಹೋಗಿತ್ತು. ತಾಯಿತನ ಎನ್ನುವುದು ಸರಳವಾದ ಕೆಲಸ ಅಲ್ಲ. ಪಾರ್ಟ್ ಟೈಮ್ ಅಂತೂ ಅಲ್ಲವೇ ಅಲ್ಲ. ಹಾಗಾಗಿ ನಾನು ಮಗಳ ಜೊತೆಗೇ ತೊಡಗಿಕೊಂಡಿದ್ದೆ. ಮಗಳು, ಜಾನಕಿಯನ್ನು ಹೇಗೆ ಆಟವಾಡಿಸುವುದು, ಅವಳನ್ನು ಹೇಗೆ ಸಂಭಾಳಿಸುವುದು, ಸಮಾಧಾನ ಮಾಡಿಸುವುದು ಎಂಬುದನ್ನೆಲ್ಲ ಆಲೋಚಿಸುವುದರಲ್ಲಿಯೇ ನನ್ನ ಸೃಜನಶೀಲತೆ ವ್ಯಯವಾಗುತ್ತಿತ್ತು. ನಾನು, ನನ್ನ ಗಂಡ ಅವಳಿಗೆ ಕಥೆಗಳನ್ನು ಹೇಳುತ್ತಿದ್ದೇವೆ. ಕೆಲವು ಕಥೆಗಳನ್ನು ನಾವೇ ಕಟ್ಟಿ ಹೇಳಿದರೆ, ಇನ್ನು ಕೆಲವು ಪೌರಾಣಿಕ ಕಥೆಗಳನ್ನು ಹೇಳುತ್ತಿದ್ದೇವೆ. ಇವೆಲ್ಲವೂ ನನ್ನೊಳಗಿನ ಸೃಜನಶೀಲತೆಯನ್ನು ಜೀವಂತವಾಗಿ ಇರಿಸಿವೆ ಎಂದೇ ನನಗನಿಸುತ್ತದೆ’ ಎನ್ನುವ ಶ್ರುತಿ ಕ್ರಮೇಣ ಬರವಣಿಗೆ, ನಿರ್ದೇಶನ, ನಟನೆ ಹೀಗೆ ಚಿತ್ರರಂಗದ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳುವ ಆಲೋಚನೆಯಲ್ಲಿದ್ದಾರೆ.

ಈಗಾಗಲೇ ಅವರಿಗೆ ಬೇರೆ ಬೇರೆ ಭಾಷೆಗಳಿಂದ ನಟನೆಯ ಅವಕಾಶಗಳು ಬರುತ್ತಿದ್ದರೂ ಅವು ಯಾವುವೂ ಅಂತಿಮ ಹಂತಕ್ಕೆ ಬಂದಿಲ್ಲ. ಆದರೆ ಬಹುಮುಖಿಯಾಗಿ ಚಿತ್ರರಂಗದಲ್ಲಿ ತೊಡಗಿಕೊಳ್ಳುವ ಅವರ ಉತ್ಸಾಹವಂತೂ ಮತ್ತೆ ಗರಿಗೆದರಿದೆ.

ಹೀಗಳೆದವರ ಜೊತೆಗೆ ಜಗಳವಾಡುತ್ತ ಕೂಡುವುದಕ್ಕಿಂತ ನಮ್ಮ ಕೆಲಸದ ಮೂಲಕವೇ ಉತ್ತರ ಕೊಡುವುದು ಒಳ್ಳೆಯದು. ಖಂಡಿತ ಅದನ್ನು ಮಾಡಿ ತೋರಿಸುತ್ತೇನೆ ಎಂದು ವಿಶ್ವಾಸದಿಂದ ಹೇಳುತ್ತಾರೆ ಶ್ರುತಿ. ಅವರು ಮತ್ತೆ ಚಿತ್ರರಂಗದಲ್ಲಿ ತೊಡಗಿಕೊಳ್ಳುವುದು ಅವರೊಬ್ಬರ ಮಟ್ಟಿಗಷ್ಟೇ ಅಲ್ಲ, ಇಡೀ ಚಿತ್ರರಂಗಕ್ಕೂ ಅಗತ್ಯವಾದ ಔಷಧ ಎನ್ನುವುದರಲ್ಲಿ ಎರಡು ಮಾತಿಲ್ಲ. ■



# ತೆರೆ ಮೇಲೆ ಕುಂವೀ ಸಣ್ಣಕಥೆ



ಕನ್ನಡದಲ್ಲಿ ಸಾಹಿತ್ಯ ಕೃತಿ ಆಧರಿಸಿದ ಸಿನಿಮಾಗಳು ತುಂಬ ಕಡಿಮೆಯಾಗುತ್ತಿವೆ ಎಂಬ ಮಾತುಗಳು ಗಟ್ಟಿಯಾಗಿ ಕೇಳಿಬರುತ್ತಿರುವ ಹೊತ್ತಿನಲ್ಲೇ, ‘ಕುಬುಸ’ ಸಿನಿಮಾ ತಯಾರುಗೊಳ್ಳುತ್ತಿದೆ. ಖ್ಯಾತ ಲೇಖಕ ಕುಂ.ವೀರಭದ್ರಪ್ಪ ಅವರ ಸಣ್ಣಕಥೆಯನ್ನು ಆಧರಿಸಿದ ‘ಕುಬುಸ’ ಸಿನಿಮಾವನ್ನು ರಮೇಶ್ ಎನ್ನುವವರು ನಿರ್ದೇಶಿಸುತ್ತಿದ್ದಾರೆ. ವಿ. ಶೋಭಾ ಇದಕ್ಕೆ ಹಣ ಹೂಡಿದ್ದಾರೆ.

ಪ್ರಥಮ ಪಿ.ಯು.ಸಿ. ಐಚ್ಛಿಕ ಕನ್ನಡ ಪಠ್ಯದಲ್ಲಿ ಸೇರಿರುವ ಈ ಕಥೆಯನ್ನು ತೆರೆಗೆ ಒಗ್ಗಿಸಿದ್ದಾರೆ ರಮೇಶ್. ‘ರಾಮಾ ರಾಮಾ ರೇ’ ಖ್ಯಾತಿಯ ನಟರಾಜ್ ಈ ಚಿತ್ರದ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ.

ಈ ಸಿನಿಮಾದ ಕೇಂದ್ರದಲ್ಲಿರುವ ಹೆಣ್ಣು ಶ್ರಮವಹಿಸಿ ಮಗನನ್ನು ಓದಿಸಿರುವವಳು. ಓದಿ ನಗರದಲ್ಲಿ ನೌಕರಿ ಹಿಡಿದ ಮಗ, ಅವ್ವನನ್ನು ಅಲ್ಲಿಗೇ ಕರೆದುಕೊಂಡು ಹೋಗುತ್ತಾನೆ. ಹುಟ್ಟಾ ಕುಬುಸ ಧರಿಸಿ ಗೊತ್ತಿಲ್ಲದ ತಾಯಿ, ನಗರದಲ್ಲಿ ಅದರಿಂದ ಎದುರಿಸುವ ಮುಜುಗರ, ಅವಮಾನಗಳೇ ಈ ಚಿತ್ರದ ಕೇಂದ್ರವೃತ್ತಾಂತ. ಎರಡು ಸಂಸ್ಕೃತಿಗಳ ನಡುವಿನ ಘರ್ಷಣೆ, ಅದರಿಂದ ಮನುಷ್ಯ ಸಂಬಂಧಗಳಲ್ಲಿ ಉಂಟಾಗುವ ಬಿರುಕುಗಳನ್ನು ತೆರೆಯ ಮೇಲೂ ಅಷ್ಟೇ ಸಂಕೀರ್ಣವಾಗಿ ಕಟ್ಟಿಕೊಡುವ ಪ್ರಯತ್ನವನ್ನು ರಮೇಶ್ ಮಾಡಿದ್ದಾರಂತೆ.

ಹನುಮಕ್ಕ ಎಂಬ ರಂಗಭೂಮಿ ಕಲಾವಿದೆ ಈ ಚಿತ್ರದಲ್ಲಿ ನಟರಾಜ್ ಅಮ್ಮನಾಗಿ ನಟಿಸಿದ್ದಾರೆ. ಮಹಾಲಕ್ಷ್ಮಿ ಎಂಬ ಹೊಸ ಪ್ರತಿಭೆ ನಾಯಕಿಯಾಗಿ ನಟಿಸಿದ್ದಾರೆ. ಮಂಜಮ್ಮ ಜೋಗತಿ, ಹುಲುಗೆಪ್ಪ ಕಟ್ಟೀಮನಿ ಈ ಸಿನಿಮಾದಲ್ಲಿ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೊಸಪೇಟೆ, ಕಮಲಾಪುರ, ಹಂಪಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಚಿತ್ರವನ್ನು ಚಿತ್ರೀಕರಿಸಲಾಗಿದೆ. ಪ್ರದೀಪ ಶರ್ಮ ಸಂಗೀತ, ಚೇತನ್ ಶರ್ಮ ಛಾಯಾಗ್ರಹಣ ಈ ಸಿನಿಮಾಗಿದೆ. ■

# ‘ಅತ್ತು ಅವನ ಮನಸ್ಸು ನೋಯಿಸದಿರಿ!’



‘ವಿಜಯ್ ಇಲ್ಲ, ವಿಜಯ್ ಇಲ್ಲ ಎಂದು ಮಾತು ಮಾತಿಗೂ ಅಳಬೇಡಿ. ಅತ್ತರೆ ಏನೂ ಆಗಲ್ಲ. ಅದರ ಬದಲಿಗೆ ಅವನು ಇಲ್ಲೇ ಇದ್ದಾನೆ ಅಂದುಕೊಳ್ಳಿ. ನಮಗೆ ಇಂಥ ಒಳ್ಳೆಯ ಕೆಲಸ ಮಾಡೋಕೆ ಸ್ಫೂರ್ತಿಯಾಗಿದ್ದಾನೆ ಅಂದುಕೊಳ್ಳಿ. ಅತ್ತರೆ ಅವನ ಮನಸ್ಸು ನೋಯುತ್ತೆ. ಅವನನ್ನು ನೋಯಿಸುವ ಕೆಲಸ ಮಾಡಬೇಡಿ’ –ಹೀಗೆಂದು ವಿನಂತಿಸಿಕೊಂಡಿದ್ದು ರಂಗಭೂಮಿಯ ಹಿರಿಯ ಜೀವ ಬಿ. ಜಯಶ್ರೀ. ಅರವಿಂದ್ ಕುಪ್ಳೀಕರ್ ನಿರ್ದೇಶನದ ‘ಪುಕ್ಸಟ್ಟೆ ಲೈಫು’ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದ ಎಲ್ಲರಿಗಿಂತ, ಗೈರು ಹಾಜರಿಯಾಗಿದ್ದ ಸಂಚಾರಿ ವಿಜಯ್ ಅವರ ನೆನಪುಗಳೇ ಹೆಚ್ಚು ತುಂಬಿತ್ತು. ಅಪಘಾತದಲ್ಲಿ ತೀರಿಕೊಂಡ ಅವರ ನೆನಪನ್ನು ಚಿತ್ರತಂಡದ ಎಲ್ಲರೂ ಮೆಲುಕುಹಾಕುತ್ತ ಹನಿಗಣ್ಣಾಗುತ್ತಿರುವಾಗ, ಮಾಗಿದ ಜೀವ ಜಯಶ್ರೀ ಅವರ ಮಾತು ಅವರೆಲ್ಲರಿಗೆ ಅಮ್ಮನ ಹಸ್ತವಾಗಿ ನೆತ್ತಿ ನೇವರಿಸಿದಂತಿತ್ತು.

ಸಂಚಾರಿ ವಿಜಯ್ ಶಹಜಹಾನ್ ಎಂಬ, ಬೀಗ ರಿಪೇರಿಯ ಯುವಕನಾಗಿ ಕಾಣಿಸಿಕೊಂಡಿರುವ ಈ ಚಿತ್ರದಲ್ಲಿ ಮಾತಂಗಿ ಪ್ರಸನ್ನ ನಾಯಕಿಯಾಗಿದ್ದಾರೆ. ರಂಗಾಯಣ ರಘು, ಅಚ್ಯುತ್ ಕುಮಾರ್ ಸೇರಿದಂತೆ ಪ್ರತಿಭಾವಂತರ ತಾರಾಗಣ ಹೊಂದಿರುವ ಈ ಚಿತ್ರಕ್ಕೆ ನಾಗರಾಜ ಸೋಮಯಾಜಿ ಹಣ ಹೂಡಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಹಿನ್ನೆಲೆ ಸಂಗೀತ ಮತ್ತು ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಇತ್ತೀಚೆಗೆ ‘ಪುಕ್ಸಟ್ಟೆ ಲೈಫು’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಒಳ್ಳೆಯ ಸ್ಪಂದನ ಸಿಗುತ್ತಿದೆ.

ಚಿತ್ರ: ಕೆ.ಎನ್. ನಾಗೇಶ ಕುಮಾರ್

